"ನಿಮಗೆ ಮಕ್ಕಳಿಲ್ವಾ?" ಬಾಯಿಗೆ ಬಂದ ಮಾತು ಹೊರಗೆಡವಿದೆ. ಯಾಕೋ ಅಧಿಕಪ್ರಸಂಗ ಅಂತ ಅನ್ನಿಸಿತ್ತು. ಆದರೆ, ಆತ ಸಹಜವಾಗಿದ್ದ. ಮತ್ತೆ ಮಾತು ಮುಂದುವರಿಸಿದ.

"ಹಾ... ಅಮ್ಮ ತೀರ್ಕೊಂಡು ಒಂದು ವರ್ಷಕ್ಕೆ ಆಕೆ ಗರ್ಭಿಣಿಯಾದಳು. ಆಹಾ... ಏನು ಸಂಭ್ರಮ ನಮಗಿಬ್ಬರಿಗೂ. ತಿಂಗಳು ತುಂಬಿ ಆರೋಗ್ಯವಂತ ಗಂಡು ಮಗು ಹುಟ್ಟಿತು. ನನಗಾಗ ಒಮ್ಮೆ ಸಂಜೆಯಾದರೆ ಸಾಕು ಎಂಬ ಕಾತರ. ಮನೆಗೆ ಓಡಿ ಹೋಗುತ್ತಿದ್ದೆ. ಮಗುವಿನ ಜೊತೆ ಆಟವಾಡುತ್ತಿದ್ದೆ. ದಿನಾ ಎದ್ದಾಗಲೂ ತುಂಬಾ ದುಡಿಯಬೇಕು ಅಂತ ಅನ್ನಿಸುತ್ತಿತ್ತು. ಮಗನಿಗೆ ಒಂದು ಒಳ್ಳೆಯ ಭವಿಷ್ಯ ಕಟ್ಟಿಕೊಡಬೇಕು ಎನ್ನುವ ಕನಸು ಇತ್ತು. ಹಾಗಂತ ನನ್ನ ಒಡೆಯ ತುಂಬಾ ದಯಾಳು ಏನೂ ಆಗಿರಲಿಲ್ಲ. ಒಂದು ಕ್ಷಣ ನಿಲ್ಲಲು ಬಿಡುತ್ತಿರಲಿಲ್ಲ. ಗಾಣದೆತ್ತಿನ ದುಡಿಮೆ. ರಜೆ ಮಾಡುವ ಹಾಗೂ ಇರಲಿಲ್ಲ. ಅದು ತೊಂದರೆಯಿರಲಿಲ್ಲ. ಆದರೆ, ಎಲ್ಲವೂ ನಾವು ಯೋಚಿಸಿದ ಹಾಗೆ ಆಗುವುದಿಲ್ಲ ತಾನೇ?" ಆತ ಒಮ್ಮೆ ನಿಲ್ಲಿಸಿದ. ನನಗೆ ಮುಂದೇನು? ಎಂಬ ಕಾತರ. ಆದರೆ, ಕೇಳುವ ಧೈರ್ಯ ಬರಲಿಲ್ಲ. ಆತ ಮಾತ್ರ ನನ್ನ ಪ್ರತಿಕ್ರಿಯೆಯನ್ನು ಗಣನೆಗೆ ತೆಗೆದುಕೊಳ್ಳದೇ ಮುಂದುವರಿಸಿದ.

"ಆವತ್ತು ನಾನು ಒಡೆಯನ ಅಪ್ಪಣೆಯಂತೆ ದೊಡ್ಡ ಮಾವಿನ ಮರ ಹತ್ತಿದ್ದೆ. ರೆಂಬೆ ಕಡಿಯಬೇಕಿತ್ತು. ಕತ್ತರಿಸಲಿದ್ದ ರೆಂಬೆಯಲ್ಲಿ ಒಂದು ಹಣ್ಣಾದ ಮಾವು ಇತ್ತು. ಅದು ನೆಲಕ್ಕೆ ಬಿದ್ದರೆ ಹಾಳಾಗಿಬಿಡಬಹುದು ಅನ್ನಿಸಿತು. ಅದನ್ನು ಮನೆಗೆ ಒಯ್ಯಬಹುದು ಎಂಬ ಆಸೆಯಲ್ಲಿ ರೆಂಬೆಯ ತುದಿಗೆ ಹೋಗಿದ್ದೆ. ಆದರೆ, ರೆಂಬೆ ಹೊರಗಿನಿಂದ ಹಸಿರಾಗಿ ಕಂಡರೂ ಒಳಗೆಲ್ಲಾ ಗೆದ್ದಲು ಹಿಡಿದಿತ್ತು. ಏನಾಗುತ್ತಿದೆ ಎಂದು ನನಗೆ ಅರಿವಾಗುವ ಹೊತ್ತಿಗೆ ನಾನು ಮರದಿಂದ ಕೆಳಕ್ಕೆ ಬಿದ್ದಾಗಿತ್ತು. ಹೊಲದಲ್ಲಿ ಕೆಲಸ ಮಾಡುತ್ತಿದ್ದವರೆಲ್ಲಾ ಓಡೋಡಿ ಬಂದರು. ಯಾರೆಲ್ಲಾ ಸೇರಿ ಮನೆಗೆ ಹೊತ್ತು ತಂದರು ಗೊತ್ತಿಲ್ಲ. ಪಾಪ ಅವಳು ನೋವಿನಿಂದ ಕಂಗೆಟ್ಟು ಅಳುತ್ತಿದ್ದಳು. ನನ್ನ ಸೊಂಟದ ಮೂಳೆಗಳಿಗೆ ಏಟಾಗಿತ್ತು. ಎದ್ದು ನಡೆಯುವುದಕ್ಕೆ ಆಗುತ್ತಿರಲಿಲ್ಲ. ಒಂದು ತಿಂಗಳು ಸಾಹುಕಾರನ ಮನೆಯಿಂದ ಒಂದೆರಡು ಅಕ್ಕಿ ಮೂಟೆಗಳು ಬಂದು ಉಣ್ಣುವುದಕ್ಕೆ ತೊಂದರೆಯಾಗಲಿಲ್ಲ. ನೆರೆಕರೆಯವರು ಕೈ ಜೋಡಿಸಿದರು. ಈಗ ಮನೆಯೊಳಗೆ ಓಡಾಡಲು ಪ್ರಾರಂಭಿಸಿದ್ದೆ. ಆದರೆ, ಕೆಲಸಕ್ಕೆ ಹೋಗುವ ಹಾಗಿರಲಿಲ್ಲ. ಮತ್ತೆ ಆಕೆಗೆ ಕೆಲಸಕ್ಕೆ ಹೋಗುವುದು ಅನಿವಾರ್ಯವಾಗಿತ್ತು. ವರ್ಷವಾಗದ ಮಗುವನ್ನು ನನ್ನ ಬಳಿ ಬಿಟ್ಟು ಅವಳು ಸಾಹುಕಾರನ ಹೊಲಕ್ಕೆ ಕೆಲಸಕ್ಕೆ ಹೋಗುತ್ತಿದ್ದಳು. ನೋವಾದರೂ ವಿಧಿಯಿರಲಿಲ್ಲ. ಮನೆಯ ಕೆಲಸ ನಾನು ತೆವಳಿ ಹೊರಳಿ ಮಾಡುತ್ತಿದ್ದೆ. ಅದರ ನಡುವೆ ಒಂದು ಹಸುವನ್ನು ನಾವು ಖರೀದಿಸಿದೆವು. ದನದ ಹಾಲು ಕುಡಿದರೆ ಮೂಳೆಗಳು ಸರಿ ಹೋಗಿ ನಾನು ಬೇಗನೇ ಗುಣ ಹೊಂದಬಹುದು ಎಂಬುದು ಅವಳ ನಿರೀಕ್ಷೆಯಾಗಿತ್ತು. ನಾನು ಬೇಡ ಅಂದೆ. ಅವಳು ಒತ್ತಾಯ ಮಾಡಿದಳು. ಮುಂದೆ ನಾನು ಸರಿ ಹೋದರೆ ಅವಳಿಗೆ ಅದನ್ನು ಸಾಕುವುದಕ್ಕೆ ತೊಂದರೆ ಇರಲಿಲ್ಲ. ಮನೆಯ ಉಪಯೋಗಕ್ಕೆ ಅಂತ ಕೂಡಿಟ್ಟ ಇದ್ದ ಬದ್ದ ಹಣ ಅದಕ್ಕಾಗಿ ಖರ್ಚಾಯಿತು. ಕೆಲಸ ಬಿಟ್ಟು ಬರುವಾಗ ಆಕೆ ದಿನಾ ಹೀಗೆ ಒಂದು ಹೊರೆ ಹುಲ್ಲು ತರುತ್ತಿದ್ದಳು" ಆತನ ಸ್ವರ ಸಣ್ಣಗಾಗಿತ್ತು.

"ಓಹೋ... ಹಾಲು ಕುಡಿದು ಸರಿ ಹೋದ್ರಿ. ಈಗ ನೀವೇ ಕೆಲಸಕ್ಕೆ ಹೋಗುತ್ತಿದ್ದೀರಿ ಅಲ್ವಾ? ಪಾಪ, ನಿಮ್ಮ ಹೆಂಡ್ತಿ ತುಂಬಾ ಕಷ್ಟಪಟ್ಟರು" ನಾನು ತಡೆಯಲಾರದೆ ಹೇಳಿಬಿಟ್ಟೆ. ಅದು ಆತನಿಗೆ ಇಷ್ಟವಾಗಲಿಲ್ಲ ಅಂತ ಅನ್ನಿಸುತ್ತೆ.

"ನಾನು ಹೇಳುವುದು ಪೂರ್ತಿ ಕೇಳುವಷ್ಟು ಸಹನೆಯಿಲ್ವಾ ನಿನಗೆ? ನಾನು ಮಾತನಾಡುತ್ತಿರುವ ನಡುವೆ ನಿನ್ನದೇನು ಪ್ರಶ್ನೆ?" ಆತನ ಧ್ವನಿ ಗಡುಸಾಗಿತ್ತು. ಆ ಏಕವಚನದ ದಬಾಯಿಸುವಿಕೆಗೆ ನನಗೆ ಒಮ್ಮೆಲೇ ಭಯವಾಗಿತ್ತು. ನಾನು ತಡಬಡಾಯಿಸಿದೆ. ಉತ್ತರಿಸುವ ಧೈರ್ಯ ಮೊದಲೇ ಇರಲಿಲ್ಲ. ಅವನು ಮತ್ತೆ ಮುಂದುವರಿಸಿದ.